




ಚಿತ್ರ: ವಿಶ್ವನಾಥ ಸುವರ್ಣ




★ ನಿಕಾನ್ ೧ ಸರಣಿಯ ಕ್ಯಾಮೆರಾಗಳು
★ ಫ್ಯೂಜಿಫಿಲ್ಮ್ ಎಕ್ಸ್ ಸರಣಿಯ ಕ್ಯಾಮೆರಾಗಳು
★ ಪ್ಯಾನಾಸಾನಿಕ್ ಲುಮಿಕ್ಸ್ ಸರಣಿಯ ಕ್ಯಾಮೆರಾಗಳು

ಫ್ಯೂಜಿ ಫಿಲ್ಮ್ ಕಂಪೆನಿಯ ಎಕ್ಸ್ ಶ್ರೇಣಿಯಲ್ಲಿ ಹಲವಾರು ದುಬಾರಿ ಮಾದರಿಗಳಿದ್ದು ವಿದೇಶಗಳಲ್ಲಿ ಫೋಟೋಜರ್ನಲಿಸ್ಟ್‌ಗಳು ಹಾಗೂ ಸ್ಟ್ರೀಟ್ ಫೋಟೋಗ್ರಾಫರ್‌ಗಳು ಹೆಚ್ಚಾಗಿ ಬಳಸುತ್ತಿದ್ದಾರೆ. ಪ್ಯಾನಾಸಾನಿಕ್ ಕಂಪೆನಿಯ ಲುಮಿಕ್ಸ್ ಕ್ಯಾಮೆರಾಗಳು ಕೂಡ ಉತ್ತಮ ಗುಣಮಟ್ಟ ಹೊಂದಿವೆ.

ಟ್ರಾವೆಲ್ ಕಾಂಪ್ಯಾಕ್ಟ್ ಕ್ಯಾಮೆರಾಗಳು

ಎಸ್‌ಎಲ್‌ಆರ್ ಕ್ಯಾಮೆರಾಗಳಂತೆ ಕಾಂಪ್ಯಾಕ್ಟ್ ಕ್ಯಾಮೆರಾಗಳು ಗುಣಮಟ್ಟ ನೀಡಬಲ್ಲವು. ಇವುಗಳಲ್ಲಿನ ಪ್ರಾಸೆಸರ್ ಹಾಗೂ ಸೆನ್ಸರ್ ಮಾಮೂಲಿ ಪಾಯಿಂಟ್ & ಶೂಟ್ ಕಾಂಪ್ಯಾಕ್ಟ್ ಕ್ಯಾಮೆರಾಗಳಿಗಿಂತ ಉತ್ತಮ. ಮಾಮೂಲಿ ಕಾಂಪ್ಯಾಕ್ಟ್ ಕ್ಯಾಮೆರಾಗಳಿಗಿಂತ ದುಬಾರಿ ಎನಿಸಿದರೂ ಆಗಾಗ್ಗೆ ಪ್ರವಾಸ ಹೋಗುತ್ತಿರುವವರಿಗೆ ಉತ್ತಮ ಚಿತ್ರ ಒದಗಿಸಬಲ್ಲ ಇಂತಹ ಹಲವಾರು ಮಾದರಿಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯ.

ಇವುಗಳಲ್ಲಿ ಕೂಡ ಮಾಮೂಲಿ ಕ್ಯಾಮೆರಾಗಳಿಗಿಂತ ದೊಡ್ಡ ಸೆನ್ಸರ್ ಬಳಸುತ್ತಾರೆ. ಇಲ್ಲವೇ ಉತ್ತಮವಾದ ಇಮೇಜ್ ಪ್ರಾಸೆಸರ್ ಬಳಸುತ್ತಾರೆ. ಆದ್ದರಿಂದ ಮೊಬೈಲ್ ಚಿತ್ರ ಅಥವಾ ಮಾಮೂಲಿ ಕಾಂಪ್ಯಾಕ್ಟ್ ಕ್ಯಾಮೆರಾ ಬಳಸಿ ತೆಗೆದ ಚಿತ್ರಗಳಿಗಿಂತ ಈ ಕ್ಯಾಮೆರಾಗಳ ಗುಣಮಟ್ಟ ಉತ್ತಮವಾಗಿರುತ್ತದೆ. ಚಿಕ್ಕದಾಗಿದ್ದು ಕೊಂಡೊಯ್ಯಲು ಅನುಕೂಲವಾಗುವ ಕಾರಣ ಮಿರರ್‌ಲೆಸ್ ಕ್ಯಾಮೆರಾಗಳಂತೆಯೇ ಇವುಗಳನ್ನು ಕೂಡ ಬಳಸಬಹುದಾಗಿದೆ.

## ಟ್ರಾವೆಲ್ ಕ್ಯಾಮೆರಾಗಳಲ್ಲಿ ಜನಪ್ರಿಯ ಮಾದರಿಗಳು

★ ಸೋನಿ ಸೈಬರ್‌ಶಾಟ್ ಆರ್‌ಎಕ್ಸ್ ಸರಣಿಯ ಕ್ಯಾಮೆರಾಗಳು
★ ನಿಕಾನ್ ಪಿ ಸರಣಿಯ ಕ್ಯಾಮೆರಾಗಳು
★ ಒಲಿಂಪಸ್ ಸ್ಟೈಲಸ್ ಸರಣಿಯ ಕ್ಯಾಮೆರಾಗಳು
★ ಪ್ಯಾನಾಸಾನಿಕ್ ಲುಮಿಕ್ಸ್ ಸರಣಿಯ ಕ್ಯಾಮೆರಾಗಳು
★ ಫ್ಯೂಜಿಫಿಲ್ಮ್ ಎಕ್ಸ್ ಸರಣಿಯ ಕ್ಯಾಮೆರಾಗಳು

ಪ್ರವಾಸ ಇವತ್ತು ಎಲ್ಲರಿಗೂ ಪ್ರಿಯವಾದ ಹವ್ಯಾಸ. ಪ್ರವಾಸದ ನೆನಪುಗಳು ಸ್ಥಿರವಾಗಿರಬೇಕೆಂದರೆ ಕ್ಯಾಮೆರಾಗಳು ಕೈಯಲ್ಲಿ ಇರಲೇಬೇಕು. ಕ್ಯಾಮೆರಾ ಖರೀದಿಸುವ ಮುನ್ನ ಯಾವತ್ತೂ ನಿಮ್ಮ ಅಗತ್ಯಗಳನ್ನು ನೋಡಿಕೊಳ್ಳಿ. ಯಾವ ರೀತಿಯ ಫೋಟೋಗಳನ್ನು ತೆಗೆಯುತ್ತೀರಿ ಎಂಬುದಕ್ಕೆ ಅನುಸಾರವಾಗಿ ಝೂಮ್ ಎಷ್ಟು ಬೇಕು ಮುಂತಾದವುಗಳನ್ನು ಅಂದಾಜು ಮಾಡಿಕೊಳ್ಳಿ. ನಿಮ್ಮ ಬಜೆಟ್ ಅನ್ನು ಮೊದಲೇ ನಿರ್ಧರಿಸಿ. ಸ್ವಲ್ಪ ಹೆಚ್ಚು ಹಣ ಹಾಕಬೇಕಾಗಿ ಬಂದರೆ ಹಿಂಜರಿಯಬೇಡಿ. ಯಾವತ್ತೂ ಬಿಲ್ ಸಮೇತ ಕ್ಯಾಮೆರಾ ಖರೀದಿಸಿ. ಇದು ಮುಂದೆ ವಾರಂಟಿ ಬೇಕಾಗಿ ಬಂದಲ್ಲಿ ಉಪಯೋಗವಾಗುತ್ತದೆ.